## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 47
ಸದಸ್ಯರ ಹೆಸರು : ಶ್ರೀ ಎಂ.ಎ.ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 10.12.2018.
ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ] | 2017-18 ಮತ್ತು 2018-19 ನೇ ಸಾಲಿನಲ್ಲಿ ಶ್ರೀ ಮಾತಾ ಟೆಕ್ನಾಲಜೀಸ್ ಸಂಸ್ಥೆಯಿಂದ ಚನ್ನರಾಯಪಟ್ಟಣ ತಾಲ್ಲೂಕಿನ ಪಶುಸಂಗೋಪನೆ ಇಲಾಖೆಗೆ ಎಷ್ಟು ದಿನಗೂಲಿ ಕಾರ್ಮಿಕರನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ: ಸದರಿ ಕಾರ್ಮಿಕರಿಗೆ ಪ್ರತಿ ಮಾಹೆಯಾನ ಪಾವತಿಸುತ್ತಿರುವ ಸಂಬಳ ಮತ್ತು<br>ಪಿಎಫ್ ಮೊತ್ತ ಎಷ್ಟು:(ಕಾರ್ಮಿಕರ ಹೆಸರು ಸಹಿತ ವಿವರ ನೀಡುವುದು) | 1) 2017-18ನೇ ಸಾಲಿಗೆ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ -25<br>2) 2018-19ನೇ ಸಾಲಿಗೆ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ -25<br>ಪ್ರತಿಯೊಬ್ಬ ಹೊರಗುತ್ತಿಗೆ ನೌಕರರಿಗೆ ಪ್ರತಿ ಮಾಹೆ ಪಾವತಿಸುತ್ತಿರುವ ವೇತನ ರೂ.16,126 (ಪಿ.ಎಫ್.ಒಬ್ಬ ನೌಕರರಿಗೆ ರೂ. 1,245/- ಮತ್ತು ಇಎಸ್ಐ ರೂ.493/- ಒಳಗೊಂಡಂತೆ)<br>ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಹೆಸರಿನ ಪಟ್ಟಿಯನ್ನು <u>ಅನುಬಂಧ-1 ರಲ್ಲಿ</u> ನೀಡಲಾಗಿದೆ. |
| ಆ] | ಯಾವ ನಿಯಮಗಳಡಿ ಈ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿದೆ: ಇಲಾಖೆ ಮತ್ತು ಏಜೆನ್ಸಿ ನಡುವೆ ಆಗಿರುವ ಒಡಂಬಡಿಕೆಗಳೇನು: ಈ ಏಜೆನ್ಸಿಯು ಸರ್ಕಾರದ ನಿಯಮಗಳನ್ವಯ ಕಾರ್ಯನಿರ್ವಹಿಸುತ್ತಿದೆಯೇ;(ವಿವರ ನೀಡುವುದು) | ಟೆಂಡರ್ ಮುಖಾಂತರ (ಕರ್ನಾಟಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-2000) ಒಪ್ಪಂದದ ಪ್ರತಿಯನ್ನು <u>ಅನುಬಂಧ-2 ರಲ್ಲಿ</u> ನೀಡಲಾಗಿದೆ. |
| ಇ] | ಈ ಕಾರ್ಮಿಕರನ್ನು ಹೊರಗುತ್ತಿಗೆ ಮೂಲಕ ಪಡೆಯುವಲ್ಲಿ ಮತ್ತು ಕೆಲಸದಿಂದ ತೆಗೆಯಲು ಉಪನಿರ್ದೇಶಕರಿಗಿರುವ ಅಧಿಕಾರಗಳೇನು: | ಉಪ ನಿರ್ದೇಶಕರುಗಳಿಗೆ ಹೊರಗುತ್ತಿಗೆ ಮೂಲಕ ಕಾರ್ಮಿಕರನ್ನು ಪಡೆಯುವ ಮತ್ತು ಕೆಲಸದಿಂದ ತೆಗೆಯಲು ಯಾವುದೇ ಅಧಿಕಾರ ಇರುವುದಿಲ್ಲ. |
| ಈ] | ಈ ಏಜೆನ್ಸಿಯು ಚನ್ನರಾಯಪಟ್ಟಣ ತಾಲ್ಲೂಕಿನ ಪಶುಸಂಗೋಪನೆ ಇಲಾಖೆಗೆ ಈ ಹಿಂದೆ ನೇಮಕ ಮಾಡಿಕೊಂಡಿದ್ದ ದಿನಗೂಲಿ ಕಾರ್ಮಿಕರನ್ನು ಕೆಲಸದಿಂದ ತೆಗೆದು ಬೇರೆ ಕಾರ್ಮಿಕರನ್ನು ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. |

| | | |
|---|---|---|
| ಉ) | ಒಮ್ಮೆ ನೇಮಕಗೊಂಡ ಕಾರ್ಮಿಕರನ್ನು ಸಕಾರಣವಿಲ್ಲದೆ ಕೆಲಸದಿಂದ ತೆಗೆಯಲು ನಿಯಮಗಳಲ್ಲಿ ಅವಕಾಶವಿದೆಯೇ: ಈ ಕಾರ್ಮಿಕರನ್ನು ಕೆಲಸದಿಂದ ತೆಗೆಯಲು ಸರ್ಕಾರವು ರೂಪಿಸಿರುವ ಮಾನದಂಡಗಳೇನು? (ವಿವರ ನೀಡುವುದು) | ಹೊರಗುತ್ತಿಗೆ ನೌಕರರನ್ನು ಟೆಂಡರ್‌ದಾರ ಸಂಸ್ಥೆಯವರು ಒದಗಿಸುತ್ತಿದ್ದು, ನೇಮಕ ಮತ್ತು ಕೆಲಸದಿಂದ ತೆಗೆಯುವುದು ಹೊರಗುತ್ತಿಗೆಯ ಟೆಂಡರ್ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. |

ಸಂ: ಪಸಂಮೀ 272 ಪಅಸೇ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಅನುಬಂಧ-01

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಹಾಸನ

**2017-18 ನೇ ಸಾಲಿನಲ್ಲಿ ಮೆ. ಮಾತಾ ಟೆಕ್ನಾಲಜೀಸ್, ಧಾರವಾಡ ಇವರಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಡಿ ದರ್ಜೆ ನೌಕರರ ವಿವರ**

| ಕ್ರ ಸಂ | ತಾಲ್ಲೂಕಿನ ಹೆಸರು | ಹೊರಗುತ್ತಿಗೆ ನೌಕರರ ಹೆಸರು | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಚನ್ನರಾಯಪಟ್ಟಣ | ದೇವರಾಜ್ ಎ.ಎನ್ "ಡಿ"ದರ್ಜೆ ನೌಕರರು. | ಪ.ಚಿ, ಅಣತಿ |
| 2 | | ಪರಮೇಶ್ ಎನ್.ಎಂ "ಡಿ"ದರ್ಜೆ ನೌಕರರು. | ಪ್ರಾ.ಪ.ಚಿ. ಕೇಂದ್ರ, ನವಿಲೆ |
| 3 | | ಜಗದೀಶ ಎ.ಡಿ "ಡಿ" ದರ್ಜೆ ನೌಕರರು. | ಪ್ರಾ.ಪ.ಚಿ.ಕೇಂದ್ರ, ಆನೆಕೆರೆ |
| 4 | | ಮಂಜುನಾಥ ಎಸ್.ಎಲ್ "ಡಿ"ದರ್ಜೆ ನೌಕರರು. | ಪಶುಆಸ್ಪತ್ರೆ, ಚನ್ನರಾಯಪಟ್ಟಣ |
| 5 | | ಹೇಮಂತ "ಡಿ"ದರ್ಜೆ ನೌಕರರು. | ಪ.ಚಿ, ಅತ್ತಿಹಳ್ಳಿ |
| 6 | | ಪದ್ಮಾವತಿ ಬಿ "ಡಿ"ದರ್ಜೆ ನೌಕರರು. | ಪ.ಚಿ ಅಯ್ಯಾರಹಳ್ಳಿ |
| 7 | ಚನ್ನರಾಯಪಟ್ಟಣ | ಸಂತೋಷ್ ಡಿ "ಡಿ"ದರ್ಜೆ ನೌಕರರು. | ಪ್ರಾ.ಪ.ಚಿ.ಕೇಂದ್ರ,ಬಾಳಗಂಚಿ |
| 8 | | ಸಿ.ಕೆ ಮೂರ್ತಿ "ಡಿ"ದರ್ಜೆ ನೌಕರರು. | ಪ.ಚಿ.ಬಳಘಟ್ಟ |
| 9 | | ಮಹೇಶ್ ಎ.ಎನ್. "ಡಿ"ದರ್ಜೆ ನೌಕರರು. | ಪ್ರಾ.ಪ.ಚಿ.ಕೇಂದ್ರ, ಕುಂದೂರು ಮಠ |
| 10 | | ಪ್ರತೀಪ ಟಿ.ಕೆ "ಡಿ"ದರ್ಜೆ ನೌಕರರು. | ಪಶುಆಸ್ಪತ್ರೆ, ಬಾಗೂರು |
| 11 | | ಶಕುಂತಲ ಸಿ.ಹೆಚ್ "ಡಿ"ದರ್ಜೆ ನೌಕರರು | ಪ್ರಾ.ಪ.ಚಿ.ಕೇಂದ್ರ, ಬಿದರೆ |
| 12 | | ಚೇತನ್-ಹೆಚ್.ಎನ್ "ಡಿ"ದರ್ಜೆ ನೌಕರರು. | ಪ್ರಾ.ಪ.ಚಿ.ಕೇಂದ್ರ, ಗಿರಿಕ್ಷೇತ್ರ |
| 13 | ಚನ್ನರಾಯಪಟ್ಟಣ | ರಘು ಎ.ಎನ್. "ಡಿ"ದರ್ಜೆ ನೌಕರರು. | ಪ್ರಾ.ಪ.ಚಿ. ಕೇಂದ್ರ, ನೇರಲಕೆರೆ |
| 14 | | ವಿ.ಸಿ ಲೋಹಿತ್ "ಡಿ"ದರ್ಜೆ ನೌಕರರು | ಪ್ರಾ.ಪ.ಚಿ. ಕೇಂದ್ರ,ವಳಗೇರಹಳ್ಳಿ |
| 15 | | ಜಿತೇಂದ್ರ ಕುಮಾರ್ "ಡಿ"ದರ್ಜೆ ನೌಕರರು. | ಪ.ಚಿ, ದಿಡಗ |
| 16 | | ಅನಿತಾ "ಡಿ" ದರ್ಜೆ ನೌಕರರು | ಪ್ರಾ.ಪ.ಚಿ.ಕೇಂದ್ರ,ಗೌಡಗೆರೆ |

| | | | |
|---|---|---|---|
| 17 | | ಕಿರಣ<br>"ಡಿ"ದರ್ಜೆ ನೌಕರರು. | ಪ.ಚಿ ಜಿನ್ನೇನಹಳ್ಳಿ |
| 18 | | ಮಂಜುನಾಥ<br>"ಡಿ"ದರ್ಜೆ ನೌಕರರು. | ಪ.ಚಿ, ಕಬ್ಬಳಿ |
| 19 | ಚನ್ನರಾಯಪಟ್ಟಣ | ಭರತ್<br>"ಡಿ"ದರ್ಜೆ ನೌಕರರು. | ಪ.ಚಿ, ಮಟ್ಟನವಿಲೆ |
| 20 | | ವಿಶ್ವನಾಥ ಎನ್.ಎಲ್<br>"ಡಿ"ದರ್ಜೆ ನೌಕರರು. | ಪಶುಆಸ್ಪತ್ರೆ, ನುಗ್ಗೇಹಳ್ಳಿ |
| 21 | | ಶಿವಕುಮಾರ್<br>"ಡಿ"ದರ್ಜೆ ನೌಕರರು. | ಪ.ಚಿ ರಾಂಪುರ |
| 22 | | ಧರ್ಮರಾಜ್ ವಿ.ಟಿ<br>"ಡಿ"ದರ್ಜೆ ನೌಕರರು. | ಪ.ಚಿ, ಸಾತೇನಹಳ್ಳಿ |
| 23 | | ಪುಷ್ಪಾವತಿ ಜಿ.ಎಸ್<br>"ಡಿ"ದರ್ಜೆ ನೌಕರರು. | ಪ.ಚಿ ಉದಯಪುರ |
| 24 | | ಜಮುನಾ<br>"ಡಿ" ದರ್ಜೆ ನೌಕರರು | ಪ್ರಾ.ಪ.ಚಿ.ಕೇಂದ್ರ,ತಗಡೂರು |
| 25 | | ನವೀನ್ ಕುಮಾರ್ ಎಚ್.ಎಂ<br>"ಡಿ" ದರ್ಜೆ ನೌಕರರು | ಪಶುಚಿಕಿತ್ಸಾಲಯ ಕಲ್ಕೆರೆ |

### ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಹಾಸನ

**2018-19-ನೇ ಸಾಲಿನಲ್ಲಿ ಮೆ. ಮಾತಾ ಟೆಕ್ನಾಲಜೀಸ್, ಧಾರವಾಡ ಇವರಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಡಿ ದರ್ಜೆ ನೌಕರರ ವಿವರ**

| ಕ್ರ ಸಂ | ತಾಲ್ಲೂಕಿನ ಹೆಸರು | ಹೊರಗುತ್ತಿಗೆ ನೌಕರರ ಹೆಸರು | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಚನ್ನರಾಯಪಟ್ಟಣ | ಹೇಮಂತ | ಪ.ಚಿ.ಅತ್ತಿಹಳ್ಳಿ |
| 2 | | ಸತೀಶ್ ಜಿ.ಎನ್ | ಪ್ರಾ.ಪ.ಚಿ.ಕೇಂದ್ರ, ಗೌಡಗೆರೆ |
| 3 | | ಚೇತನ್ ಬಿ.ಹೆಚ್ | ಪ್ರಾ.ಪ.ಚಿ.ಕೇಂದ್ರ, ಬಾಳಗಂಚಿ |
| 4 | | ಕಿರಣ್ | ಪ.ಚಿ ಜಿನ್ನೇನಹಳ್ಳಿ |
| 5 | | ಪ್ರತೀಪ ಟಿ.ಕೆ | ಪ.ಚಿ, ಬಾಗೂರು |
| 6 | | ಪ್ರೇಮ | ಪ್ರಾ.ಪ.ಚಿ.ಕೇಂದ್ರ, ತಗಡೂರು |
| 7 | | ಮಂಜುನಾಥ್ ಡಿ | ಪ.ಚಿ, ಬಳಘಟ್ಟ |
| 8 | | ಚೇತನ್ | ಪ.ಚಿ, ಸಾತೇನಹಳ್ಳಿ |
| 9 | | ಮಂಜುನಾಥ | ಪ.ಚಿ, ಕಬ್ಬಳಿ |
| 10 | | ದೇವರಾಜ್ ಎ.ಎನ್ | ಪ.ಚಿ, ಅಣತಿ |
| 11 | | ವಿ.ಸಿ ಲೋಹಿತ್ | ಪ್ರಾ.ಪ.ಚಿ, ಕೇಂದ್ರ, ವಳಗೇರಹಳ್ಳಿ |
| 12 | | ಪರಮೇಶ್ವರಪ್ಪ | ಪ್ರಾ.ಪ.ಚಿ.ಕೇಂದ್ರ, ಬಿದರೆ |
| 13 | | ಕೀರ್ತಿ ಪ್ರಸಾದ್.ಎಸ್.ಎಂ | ಪ್ರಾ.ಪ.ಚಿ.ಕೇಂದ್ರ, ಗಿರಿಕ್ಷೇತ್ರ |
| 14 | | ನವೀನ್ ಕುಮಾರ್ | ಪಶು ಆಸ್ಪತ್ರೆ ಚನ್ನರಾಯಪಟ್ಟಣ |
| 15 | | ಭರತ್ | ಪ.ಚಿ.ಮಟ್ಟನವಿಲೆ |
| 16 | | ಕಾರ್ತಿಕ್‌ಗೌಡ ಡಿ.ಎನ್ | ಪಶು ಆಸ್ಪತ್ರೆ ನುಗ್ಗೇಹಳ್ಳಿ |
| 17 | | ಹನುಮಯ್ಯ | ಪ್ರಾ.ಪ.ಚಿ ಕೇಂದ್ರ ನವಿಲೆ |
| 18 | | ಕೃಷ್ಣಸಿಂಗ್ ಎ.ಆರ್ | ಪ್ರಾ.ಪ.ಚಿ ಕೇಂದ್ರ ಆನೆಕೆರೆ |
| 19 | | ನವೀನ್ ಕುಮಾರ್ ಎಚ್.ಎಂ | ಪ.ಚಿ, ಕಲ್ಕೆರೆ |
| 20 | | ಪುಷ್ಪವಾತಿ ಜಿ.ಎಸ್ | ಪ್ರಾ.ಪ.ಚಿ ಬ್ಯಾಡರಹಳ್ಳಿ |
| 21 | | ಪವನ್ ಕುಮಾರ್ ಸಿ.ಕೆ | ಪ್ರಾ.ಪ.ಚಿ ದಿಂಡಗೂರು |
| 22 | | ಸಾಯಿ ಪ್ರಸಾದ್ ರಾವುತ್ | ಪಶು ಆಸ್ಪತ್ರೆ, ಚನ್ನರಾಯಪಟ್ಟಣ |
| 23 | | ಅನಿತಾ | ಪ.ಚಿ. ದಮ್ಮನಿಂಗಲ |
| 24 | | ಮನೋಜ.ಎನ್.ಕೆ. | ಪ.ಚಿ. ಉದಯಪುರ |
| 25 | | ಶಶಿವಕುಮಾರ್ | ಪ್ರಾ.ಪ.ಚಿ ಕುಂದೂರುಮಠ |

ಉಪ ನಿರ್ದೇಶಕರು
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹಾಸನ

ಅನುಬಂಧ-02

# INDIA NON JUDICIAL

# Government of Karnataka

## e-Stamp

सत्यमेव जयते

| | | |
|---|---|---|
| **Certificate No.** | : | IN-KA96325158389301P |
| Certificate Issued Date | : | 31-Aug-2017 12:41 PM |
| Account Reference | : | NONACC (FI)/ kaksfcl08/ HANUMANTH NGR/ KA-BA |
| Unique Doc. Reference | : | SUBIN-KAKAKSFCL0841814286674947P |
| Purchased by | : | MATHA TECHNOLOGIES DHARWAD |
| Description of Document | : | Article 12 Bond |
| Description | : | AGREEMENT |
| Consideration Price (Rs.) | : | 0<br>(Zero) |
| First Party | : | THE COMMISSIONER A H AND V S BANGALORE |
| Second Party | : | MATHA TECHNOLOGIES DHARWAD |
| Stamp Duty Paid By | : | MATHA TECHNOLOGIES DHARWAD |
| Stamp Duty Amount(Rs.) | : | 500<br>(Five Hundred only) |

Udaya Souharda Credit Co-op. Ltd. Hanumanthnagar Bangalore-19

Please write or type below this line

ಗುತ್ತಿಗೆ ಕರಾರು ಒಪ್ಪಂದ ಪತ್ರ

ಈ ದಿನ **ಶನಿವಾರ** ಇಪ್ಪತ್ಮೂರು ಸೆಪ್ಟೆಂಬರ್ ಎರಡು ಸಾವಿರ ಹದಿನೇಳನೇ ಇಸ್ವಿ (23-09-2017) ರಂದು **ಆಯುಕ್ತರು, ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560019** (ಇನ್ನು ಮೇಲೆ ಒಂದನೇ ಪಾರ್ಟಿ) ಯಾವುದರ ವ್ಯಾಖ್ಯಾನದಲ್ಲಿ ಅವರ ಉತ್ತರಾಧಿಕಾರಿ ಮತ್ತು ವಾರಸುದಾರರನ್ನು ಒಳಗೊಂಡಿರುತ್ತದೆಯೋ, ಹಾಗು ಮೆ: ಮಾತಾ ಟೆಕ್ನಾಲಾಜೀಸ್, "ಮಾತೃಕೃಪಾ" ಪ್ಲಾಟ ನಂ:106, ಮೊದಲನೇ ಮುಖ್ಯ ರಸ್ತೆ, ಐದನೇಯ



No. of Correction - 1.

23.9.2017

ಆಯುಕ್ತರು

For MATHA TECHNOLOGIES

Managing Partner

**Statutory Alert:**

1. The authenticity of this Stamp Certificate should be verified at "www.shcilestamp.com". Any discrepancy in the details on this Certificate and as available on the website renders it invalid.
2. The onus of checking the legitimacy is on the users of the certificate.
3. In case of any discrepancy please inform the Competent Authority.

ಅಡ್ಡ ರಸ್ತೆ, ಸಪ್ತಗಿರಿ ನಗರ, ಯಾಲಕ್ಕಿ ಶೆಟ್ಟರ್ ಕಾಲೋನಿ, ಧಾರವಾಡ-580004 ಸಂಸ್ಥೆಯ ಪಾಲುದಾರರ ಪ್ರತಿನಿಧಿ ಶ್ರೀ ರಾಮಪ್ಪ ರಾಠೋಡ (ಇನ್ನು ಮೇಲೆ ಎರಡನೇ ಪಾರ್ಟಿ) ಯಾವುದರ ವ್ಯಾಖ್ಯಾನದಲ್ಲಿ ಅವರ ಉತ್ತರಾಧಿಕಾರಿ ಮತ್ತು ವಾರಸುದಾರರನ್ನು ಒಳಗೊಂಡಿರುತ್ತದೆಯೋ, ಇವರ ಮಧ್ಯ ಸರಕಾರದ ಪತ್ರ ಸಂಖ್ಯೆ :ಪಸಂಮೀ/255/ಪಅಸೇ/2014 ದಿನಾಂಕ 07-08-2017 ರ ಪತ್ರಕ್ಕೆ ಅನುಗುಣವಾಗಿ ದಿನಾಂಕ: **14-01-2016** ರ ಕರಾರು ಒಪ್ಪಂದ ಪತ್ರದ ಮುಂದುವರೆದ ಭಾಗವಾಗಿ ಹಾಗೂ ಭಾಗಶಃ ಮಾರ್ಪಡಿಸಿದ ಈ ಗುತ್ತಿಗೆ ಕರಾರು ಒಪ್ಪಂದವನ್ನು ಉಭಯೇತ್ರರು ಈ ಕೆಳಗಿನಂತೆ ಒಪ್ಪಿ ಮಾಡಿಕೊಳ್ಳಲಾಗಿದೆ.

**ಏನೇಂದರೆ,**

ಸರಕಾರದ ಪತ್ರ ದಿನಾಂಕ 07-08-2017 ರಲ್ಲಿ ಸೂಚಿಸಿರುವಂತೆ ಒಂದನೇ ಪಾರ್ಟಿಯಾದ ಆಯುಕ್ತರು, ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಬೆಂಗಳೂರು, ಮಾನವ ಸಂಪನ್ಮೂಲ ಸೇವೆ ಪಡೆಯುವ ಇವರು ಹಾಗೂ ಎರಡನೇ ಪಾರ್ಟಿ ಎಂದರೆ **ಮೆ: ಮಾತಾ ಟೆಕ್ನಾಲಜೀಸ್, ಧಾರವಾಡ** ಇವರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸರಬರಾಜು ಏಜೆನ್ಸಿ, ಉಭಯೇತ್ರರು ಒಪ್ಪಿ ಈ ಹಿಂದಿನ ದಿನಾಂಕ 14-01-2016 ಕರಾರು ಪತ್ರದ ಷರತ್ತಗಳು ಕ್ರಮ ಸಂಖ್ಯೆ 1 ರಂತೆ ನೇರ ನೇಮಕಾತಿ ಆಗುವವರೆಗೆ ಅಥವಾ ಹಾಲಿ ಕರಾರು ಒಪ್ಪಂದದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಮತ್ತು ಈ ಕೆಳಕಂಡ ಕ್ರಮ ಸಂಖ್ಯೆ ಎಂಟರ ನಿಬಂಧನೆಗೊಳಪಟ್ಟು ಇನ್ನೊಂದು ಅವಧಿಗೆ ಈ ಕರಾರು ಊರ್ಜಿತದಲ್ಲಿರುತ್ತದೆ. ಹಾಗೂ ಕ್ರಮ ಸಂಖ್ಯೆ ಏಳರ ನಿಬಂಧನೆಗೊಳಪಟ್ಟು 880 ಮತ್ತು ಒಂದನೇ ಪಾರ್ಟಿಯಿಂದ ಬೇಡಿಕೆ ಇದ್ದಲ್ಲಿ ಹೆಚ್ಚುವರಿ **"ಡ"** ದರ್ಜೆಯ ನೌಕರರ ಸೇವೆಯನ್ನು ಹೊರಗುತ್ತಿಗೆ ಮೇರೆಗೆ ಇಲಾಖೆಯ ಪಶುವೈದ್ಯ ಸಂಸ್ಥೆಗಳಿಗೆ ಸಿಬ್ಬಂದಿಗಳ ಸೇವೆ ನೀಡಬೇಕು. ಒಂದು ವೇಳೆ ನೇರ ನೇಮಕಾತಿ/ಅನುಕಂಪದ ನೇಮಕಾತಿ/ವರ್ಗಾವಣೆಯಿಂದ ಇಲಾಖೆಯ ನೌಕರರು ಬಂದರೆ ಅಂತಹ ಸ್ಥಾನಗಳನ್ನು ಹೊರಗುತ್ತಿಗೆ ಸಿಬ್ಬಂದಿ ಬಿಟ್ಟು ಕೊಡುವುದು ಹಾಗೂ ವರ್ಗಾವಣೆ/ನಿವೃತ್ತಿ/ಪದೋನ್ನತಿ ಮತ್ತು ಇನ್ನಿತರೆ ಕಾರಣಗಳಿಂದ ತೆರವಾಗುವ ಸ್ಥಾನಗಳಿಗೆ ಜಿಲ್ಲಾ ಉಪ ನಿರ್ದೇಶಕರ ಸೂಚನೆಯಂತೆ ಎರಡನೇ ಪಾರ್ಟಿಯವರು ಸಿಬ್ಬಂದಿ ಸೇವೆಯನ್ನು ಒದಗಿಸಲು ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ಒಪ್ಪಿರುತ್ತಾರೆ.

1. ಎರಡನೇ ಪಾರ್ಟಿಯವರು ಒದಗಿಸುವ ಸಿಬ್ಬಂದಿಗಳ ಸೇವೆ ಮಾತ್ರ ಸಂಬಂಧಿಸಿದಂತೆ ಯಾವುದಾದರೂ ಅಕ್ಷೇಪಾರ್ಹ ನ್ಯೂನ್ಯತೆಗಳು ಅಥವಾ ವಿವಾದಗಳು ಕಂಡುಬಂದಲ್ಲಿ ಮತ್ತು ಅಂತಹ ನ್ಯೂನ್ಯತೆಗಳು ಅಥವಾ ವಿವಾದಗಳನ್ನು ರಾಜ್ಯ ಮಟ್ಟದ ಅಧಿಕಾರಿಗಳು/ಜಿಲ್ಲಾ ಉಪನಿರ್ದೇಶಕರುಗಳಿಂದ ಲಿಖಿತ ರೂಪದಲ್ಲಿ ಒಂದನೇ ಪಾರ್ಟಿಯವರು ಸ್ವೀಕರಿಸಿದ್ದಲ್ಲಿ, ಸದರಿ ನ್ಯೂನ್ಯತೆಗಳು ಅಥವಾ ವಿವಾದಗಳ ಕುರಿತು ಈ ಕರಾರನ್ನು ಕಾರ್ಯಗತಗೊಳಿಸಲು ಭಾರತದ ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಮಯ 1966 ರನ್ವಯ ಅಥವಾ ಅದರಲ್ಲಿನ ಮಾರ್ಪಾಡಗಳು ಇದ್ದರೆ ಅದರ ಉಪಬಂಧದ ಅನ್ವಯ ಬಗೆಹರಿಸಿಕೊಳ್ಳಲು ಉಭಯೇತ್ರರು ಒಪ್ಪಿರುತ್ತಾರೆ. ಸದರಿ ಸಂಧಾನಕ್ಕೆ ತಗಲುವ ವೆಚ್ಚವನ್ನು ಒಂದನೇ ಪಾರ್ಟಿಯವರು ಭರಿಸುವುದು. ಈ ರೀತಿಯ ವಿವಾದಗಳ ವ್ಯಾಜ್ಯವು, ನ್ಯಾಯಾಲಯದಲ್ಲಿದ್ದರೆ, ಅಂತಿಮ ತೀರ್ಪು ಅಗುವವರೆಗೂ ಕರಾರು/ಒಪ್ಪಂದ ಊರ್ಜಿತದಲ್ಲಿರುತ್ತದೆ. ಸದರಿ ನ್ಯಾಯ ನಿರ್ಣಯವು ಬೆಂಗಳೂರು ನ್ಯಾಯಲಯಗಳ ವ್ಯಾಪ್ತಿಗೆ ಮಾತ್ರ ಒಳಪಡುತ್ತದೆ.

2. ಎರಡನೇ ಪಾರ್ಟಿಯವರು ನಿಯೋಜಿಸುವ ಸಿಬ್ಬಂದಿ ವರ್ಗದವರು ಕನಿಷ್ಠ ವೇತನ ಕಾಯ್ದೆ 1948 ರನ್ವಯ ಹಾಗೂ ಇಲಾಖೆಯ ನಿಯಮಾವಳಿಗಳನ್ವಯ ವಾರದ ರಜೆ, ಸರಕಾರಿ ರಜೆ ಮತ್ತು ಪ್ರತಿ ತಿಂಗಳು ಒಂದು ರಜೆಯನ್ನು ಪಡೆಯುಲು ಅರ್ಹರಾಗಿರುತ್ತಾರೆ. ಹಕ್ಕಿನಲ್ಲಿ ರಜೆ ಇಲ್ಲದೆ ಗೈರು ಹಾಜರಾದಲ್ಲಿ ಅವರ ವೇತನವನ್ನು ವೇತನ ಪಾವತಿ ಕಾಯ್ದೆ 1936 ರನ್ವಯ ಕಡಿತಗೊಳಿಸಿ ಬಿಲ್ಲು ಹಾಜರು ಪಡಿಸತಕ್ಕದ್ದು. ಎರಡನೆ ಪಾರ್ಟಿಯವರು ನಿಯೋಜಿಸುವ ಯಾವುದೇ ಸಿಬ್ಬಂದಿಯವರು

23.9



For MATHA TECHNOLOGIES

Managing Partner

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಬೆಂಗಳೂರು.

[redacted]

ಸೇವೆಗೆ ದೀರ್ಘ ರಜೆ ಪಡೆದಲ್ಲಿ/ಅನಧಿಕೃತ ಗೈರು ಹಾಜರಾದಲ್ಲಿ/ಸೇವೆಯನ್ನು ತೃಪ್ತಿಕರವಾಗಿ ನೀಡದಿದ್ದಲ್ಲಿ/ಇಲಾಖೆಯ ಅಧಿಕಾರಿಗಳೊಂದಿಗೆ ಅನುಚಿತವಾಗಿ/ಇಲಾಖೆಯ ನಿಯಮಾವಳಿಗೆ ವಿರುದ್ಧವಾಗಿ ವರ್ತಿಸಿದ್ದಲ್ಲಿ/ಸೇವೆ ಒದಗಿಸುವ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಕೂಡಲೇ ಅಂತಹ ಸಿಬ್ಬಂದಿಯನ್ನು ವಜಾಗೊಳಿಸಿ ಸದರಿ ಸ್ಥಳದಲ್ಲಿ ಮೊತ್ತಬ್ಬ ಬದಲಾಯಿತ ಸಿಬ್ಬಂದಿಯನ್ನು ನಿಯೋಜಿಸುವ ಅಧಿಕಾರ/ಜವಾಬ್ದಾರಿ ಎರಡನೇ ಪಾರ್ಟಿಯದ್ದಾಗಿರುತ್ತದೆ. ಎರಡನೇ ಪಾರ್ಟಿಯವರಿಂದ ನೇಮಕಾತಿ ಮಾಡಿಕೊಳ್ಳುವ/ವಜಾಗೊಳಿಸಲ್ಪಡುವ/ಸಿಬ್ಬಂದಿಯ ನೇಮಕಾತಿ ನವೀಕರಣದ ವಿಷಯದಲ್ಲಿ ಇಲಾಖೆಯ ಅಧಿಕಾರಿಗಳ/ಸಿಬ್ಬಂದಿಗಳ ಹಸ್ತಕ್ಷೇಪ ಇರುವಂತಿಲ್ಲ. ಮತ್ತು ಎರಡನೇ ಪಾರ್ಟಿಯವರು ನಿಯೋಜಿಸುವ ಯಾವುದೇ ಸಿಬ್ಬಂದಿಯ ಸಂಬಂಧವು ಸೇವೆಗೆ ಮಾತ್ರ ಸೀಮಿತವಾಗಿರುತ್ತದೆ.

3. ಟೆಂಡರ್‌ದಾರರು ನೀಡುವ ಸಿಬ್ಬಂದಿಗಳಿಗೆ ಸೇವಾ ಅವಧಿಯಲ್ಲಿ ಪ್ರಾಣಾಪಾಯ ಆಕಸ್ಮಿಕ ಘಟನೆಗಳು ಸಂಭವಿಸಿದಲ್ಲಿ ನಿಯಮಾನುಸಾರ ಪಿ.ಎಫ್ ಮತ್ತು ಇ.ಎಸ್.ಐ ಸಂಸ್ಥೆಗಳಿಂದ ಅಗತ್ಯ ಪರಿಹಾರ ಒದಗಿಸುವುದು ಮತ್ತು ಮೊತ್ತೊಬ್ಬ ಇನ್ನೋರ್ವ ಸಿಬ್ಬಂದಿಯನ್ನು ಒದಗಿಸುವುದು ಎರಡನೇ ಪಾರ್ಟಿಯವರ ಜವಾಬ್ದಾರಿಯಾಗಿರುತ್ತದೆ. ರಾಜ್ಯ ವಿಮಾ ಕಾರ್ಮಿಕ ಕಾಯ್ದೆ 1948 ರನ್ವಯ ವಿಮಾದಾರನು ಪ್ರಾಣಾಪಾಯ ಆಕಸ್ಮಿಕ ಘಟನೆಗಳಿಗೆ ಒಳಪಟ್ಟಾಗ ಇಲಾಖೆಯು ಈ ಬಗ್ಗೆ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ. ಇಲಾಖೆಗೆ ಎರಡನೇ ಪಾರ್ಟಿ ನಿಯೋಜಿತ ಸಿಬ್ಬಂದಿಯಿಂದ ಹಾನಿ ಆದಲ್ಲಿ, ನಷ್ಟವನ್ನು ಸಂಬಂಧಿಸಿದ ಸಿಬ್ಬಂದಿಯಿಂದ/ಸಂಸ್ಥೆಯಿಂದ ಭರಿಸಿಕೊಡುವುದು ಎರಡನೇ ಪಾರ್ಟಿಯ ಜವಾಬ್ದಾರಿಯಾಗಿರುತ್ತದೆ.

4. ಟೆಂಡರ್‌ದಾರರು ಟೆಂಡರ್‌ನಲ್ಲಿ ಅನುಮೋದನೆಯಾಗಿರುವ ಕಾರ್ಮಿಕ ಇಲಾಖೆಯ ಅನುಸೂಚಿಯಲ್ಲಿ ನಮೂದಿಸಿರುವ ಅನಿಗದಿತ-ಅಪರಿಣಿತ ಸಿಬ್ಬಂದಿಯ ದರದಂತೆ ಹಾಗು ಕಾಲಕಾಲಕ್ಕೆ ಬದಲಾಗುವ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆ 1948 ರಡಿ ನಿಗದಿಪಡಿಸಿರುವ/ಪರಿಷ್ಕರಿಸುವ ಅನುಸೂಚಿತ ಉದ್ದಿಮೆಗಳ ಪಟ್ಟಿಯಲ್ಲಿ ನಮೂದಿಸದೇ ಇರುವ ಮತ್ತು ಅನುಸೂಚಿತ ಉದ್ದಿಮೆಗಳಲ್ಲದ ಸಂಸ್ಥೆಗಳಿಗೆ ನಿಗದಿಪಡಿಸಿದ ದರದಂತೆ ಸಿಬ್ಬಂದಿಗಳ ಮಾಸಿಕ ಬಿಲ್‌ಗಳನ್ನು ತಯಾರಿಸಿ ಇಲಾಖಾ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಸಲ್ಲಿಸುವುದು.

For MATHA TECHNOLOGIES

Managing Partner



ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಬೆಂಗಳೂರು

5. ಟೆಂಡರ್‌ದಾರರು ಅವಶ್ಯಕ/ಕಡ್ಡಾಯ ಕಡಿತಗಳನ್ನು ಪ್ರತಿ ಸಿಬ್ಬಂದಿಗೆ ನಿಗದಿಪಡಿಸಿದ ಮೊತ್ತದಲ್ಲಿ ಕಡಿತಗೊಳಿಸಿ, ಕಾಲ ಕಾಲಕ್ಕೆ ಕಾರ್ಮಿಕ ಇಲಾಖೆ ನಿಗದಿ ಪಡಿಸುವ/ ಹೊರಡಿಸುವ ಪರಿಷ್ಕೃತ ಆದೇಶಗಳಿಗೆ ಒಳಪಟ್ಟು ಮನೆಗೆ ತೆಗೆದುಕೊಂಡು ಹೋಗುವ ವೇತನ (Take Home Salary)ವನ್ನು ಆಯಾ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ವೇತನ ಪಾವತಿ ಕಾಯ್ದೆ 1936 ರ ಕಲಂ 5 ರನ್ವಯ ಕಡ್ಡಾಯವಾಗಿ ಬ್ಯಾಂಕ್ ಖಾತೆ ಎನ್.ಇ.ಎಫ್.ಟಿ/ ಕೋರ್ ಬ್ಯಾಂಕಿಂಗ್/ಚೆಕ್ ಮೂಲಕ ವೇತನವನ್ನು ಜಮಾ/ಪಾವತಿ ಮಾಡಬೇಕು.

6. ಸಿಬ್ಬಂದಿಗಳ ಹಾಜರಾತಿಯನ್ನು ಸೇವೆ ಪಡೆಯುವ ಪಶು ವೈದ್ಯಕೀಯ ಸಂಸ್ಥೆಗಳ ಮುಖ್ಯಸ್ಥರಿಂದ ಪಡೆದು ಸಂಬಂಧಿಸಿದ ಸಂಸ್ಥೆಗಳ ಹಣ ಸೆಳೆಯುವ ಬಟವಡೆ ಅಧಿಕಾರಿಗಳಿಂದ ದೃಢೀಕರಿಸಿ ತಿಂಗಳ ಕೊನೆಯ ದಿನದಂದು ಉಪನಿರ್ದೇಶಕರ ಕಚೇರಿಗೆ ಸಲ್ಲಿಸುವುದು. ಎರಡನೇ ಪಾರ್ಟಿಯವರು ಸಿಬ್ಬಂದಿಗಳ ಹಾಜರಾತಿ ಅನುಗುಣವಾಗಿ ಬಿಲ್‌ಗಳನ್ನು ತಯಾರಿಸಿ ಉಪನಿರ್ದೇಶಕರ ಕಚೇರಿಗೆ ಪಾವತಿಗಾಗಿ ಸಲ್ಲಿಸುವುದು.

7. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಎರಡನೇ ಪಾರ್ಟಿಯವರು ಸಲ್ಲಿಸಿದ ಬಿಲ್‌ಗಳನ್ನು ವೇತನ ಪಾವತಿ ಕಾಯ್ದೆ 1936 ರ ಕಲಂ 5 ರನ್ವಯ ಪರಿಶೀಲಿಸಿ, ಬಿಲ್‌ಗಳು ಸಲ್ಲಿತವಾದ ಒಂದು ವಾರದೊಳಗಾಗಿ ಅನುದಾನ ಲಭ್ಯವಿದ್ದಲ್ಲಿ ಡಿ.ಸಿ. ಬಿಲ್ ತಯಾರಿಸಿ ಸಂಬಂಧಪಟ್ಟ ವಿಭಾಗದ ಜಂಟಿ ನಿರ್ದೇಶಕರು (ರಾಜ್ಯ ವಲಯ) ಇವರಿಂದ ಮೇಲು ರುಜು ಪಡೆದು ಸಂಬಂಧಿಸಿದ ಟೆಂಡರ್‌ದಾರರಿಗೆ ಬಿಲ್ ಮೊತ್ತವನ್ನು ಸಂದಾಯ ಮಾಡುವುದು.

8. ಈ ಕರಾರು ಒಪ್ಪಂದದ ದಿನಾಂಕದಿಂದ ಐದು ವರ್ಷಗಳ ಅವಧಿಯು ಪೂರ್ಣಗೊಂಡನಂತರ ಖಾಲಿ ಇರುವ ಡ ದರ್ಜೆ ನೌಕರರ ಸೇವೆಯನ್ನು ಮುಂದಿನ ಐದು ವರ್ಷಗಳ ಇನ್ನೊಂದು ಅವಧಿಗೆ ಅನುದಾನ ಲಭ್ಯತೆ ಮೇರೆಗೆ ಮುಂದುವರಿಸಲು ಉಭಯೇತ್ರರು ಒಪ್ಪಿರುತ್ತಾರೆ

9. ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ಸಿಬ್ಬಂದಿಗಳು, ಎರಡನೇ ಪಾರ್ಟಿಯವರಿಂದ ನೇಮಕಾತಿಗೊಂಡಿರುವುದರಿಂದ, ಸದರಿ ಸಿಬ್ಬಂದಿಗಳು ಮತ್ತು ಎರಡನೇ ಪಾರ್ಟಿಯವರ ಮಧ್ಯ ಉದ್ಭವಿಸುವ ಯಾವುದೇ ಭಿನ್ನಾಭಿಪ್ರಾಯಗಳಲ್ಲಿ ಅಥವಾ ವಾಜ್ಯಗಳಲ್ಲಿ ಅಥವಾ ಪರಸ್ಪರರ ವ್ಯಾಜ್ಯಗಳನ್ನು ಕಾರ್ಮಿಕ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳುವುದು. ಯಾವುದೇ ಕಾರಣಕ್ಕೂ ಒಂದನೇ ಪಾರ್ಟಿಯವರು/ಇಲಾಖಾ ಅಧಿಕಾರಿಗಳು/ಸಿಬ್ಬಂದಿಯವರು ಈ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯಲ್ಲಿ ಭಾಗವಹಿಸುವಂತಿಲ್ಲ.

For MATHA TECHNOLOGIES

Managing Partner

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಬೆಂಗಳೂರು.

10. ಇನ್ನುಳಿದಂತೆ ದಿನಾಂಕ: 14-01-2016 ರ ಈ ಹಿಂದಿನ ಕರಾರು ಪತ್ರದ ಷರತ್ತು ಮತ್ತು ನಿಬಂಧನೆಗಳು, ದಿನಾಂಕ 23-09-2017 ರ ಕರಾರು ಪತ್ರದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಹೊರತುಪಡಿಸಿ ಯಥಾವತ್ತಾಗಿ ಚಾಲ್ತಿಯಲ್ಲಿರುತ್ತವೆ. ಆದಾಗ್ಯೂ ಈ ಹಿಂದೆ ದಿನಾಂಕ 14-01-2016 ರ ಕರಾರು ಒಪ್ಪಂದದ ಪ್ರಕಾರ ಭದ್ರತಾ ಠೇವಣಿ ಮೊತ್ತ ರೂ.46.125 (ರೂ. ನಲವತ್ತಾರು ಲಕ್ಷದ ಹನ್ನೆರಡು ಸಾವಿರದಾ ಐದು ನೂರು ರೂಪಾಯಿಗಳು ಮಾತ್ರ) ಗಳ (Irrevocable Bank Guarantee in a specified form) ಹಾಲಿ ಕರಾರು ಒಪ್ಪಂದದ ಅವಧಿಯವರೆಗಿನ ಬ್ಯಾಂಕ ಗ್ಯಾರೆಂಟಿಯನ್ನು ದಿನಾಂಕ: 09-01-2017 ರಂದು ನೀಡಿರುವುದನ್ನು ನವೀಕರಿಸಿ ಸಲ್ಲಿಸುವುದು.

23.9.2017

ಆಯುಕ್ತರು,
ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ
(ಒಂದನೇ ಪಾರ್ಟಿ ಸಹಿ)

For MATHA TECHNOLOGIES
Managing Partner
ಮೆ: ಮಾತಾ ಟೆಕ್ನಾಲಜೀಸ್,
ಧಾರವಾಡ.
(ಎರಡನೇ ಪಾರ್ಟಿ ಸಹಿ)

MATHA TECHNOLOGIES
Plot No. 106, "Mathru Krupa",
1st Main, 5th Cross, Sapthagiri Nagara,
Yalakki Shettar Colony,
DHARWAD-580 004.

ಸಾಕ್ಷಿ: (1)
(M S Palegar
JD. Dev)
O/o Commissioner
Bangalore.

ದಿನಾಂಕ:
(2)
(Dr N.S. Parameshwara)
Additional Director
(Development)
O/o Commissioner
Bangalore